<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>

ಓ ಎಸ್ ನಂ. **114/2015** ಪಿ .ಡಬ್ಲ್ಯೂ: **3**

<u>ದಿನಾಂಕ: **01.03.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಕೆ ಎಂ ಎಸ್ ವಕೀಲರಿಂದ:</u>

ಸುಮಾರು 20 ವರ್ಷಗಳಿಂದ ನನಗೂ 1 ನೇ ಪ್ರತಿವಾದಿಗೂ ದ್ವೇಷವಿರುತ್ತದೆ ಎಂದರೆ ಸಾಕ್ಷಿ ನಾನು ಅವರು ವಿಶ್ವಾಸದಿಂದ ಇರುತ್ತೇವೆ ಎನ್ನುತ್ತಾರೆ. ನನಗೂ ಮತ್ತು 1 ನೇ ಪ್ರತಿವಾದಿಯ ನಡುವೆ ಇದೇ ನ್ಯಾಯಾಲಯದಲ್ಲಿ ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿಯಲ್ಲ. ಅದು 1 ನೇ ಪ್ರತಿವಾದಿಗೂ ಮತ್ತು ಚನ್ನಪ್ಪಗೌಡರಿಗೆ ಸಂಬಂಧಿಸಿದ ಸಿವಿಲ್ ದಾವೆಯಾಗಿದ್ದು ಅದು 70 ವರ್ಷಗಳಿಂದ ನಡೆಯುತ್ತಿದೆ ಎನ್ನುತ್ತಾರೆ. ಸದರಿ ದಾವೆಯಲ್ಲಿ ನಾನು ಪಕ್ಷಗಾರರನಾಗಿರುವುದಿಲ್ಲ.

2015 ರಲ್ಲಿ ವಾದಿ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳ ಮೇಲೆ ಒಂದು ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿ. ಅದನ್ನು ನಾನೇ ಹೇಳಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕ್ರಿಮಿನಲ್ ಪ್ರಕರಣದಲ್ಲಿ ನಾನು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ . ದಾವಾ ಸ್ವತ್ತುಗಳಲ್ಲಿ ಸರ್ವೆ ನಂ. 22 1 ಎಕರೆ 16 ಗುಂಟೆ ಮತ್ತು ಸರ್ವೆ ನಂ. 6 - 2 ಎಕರೆ ಅಡಿಕೆ ತೋಟ ಮಾತ್ರ ನನಗೆ ಗೊತ್ತು. ದಾವಾ ಸ್ವತ್ತುಗಳಲ್ಲಿ 1 ನೇ ಪ್ರತಿವಾದಿ ತೀರಿಕೊಂಡ ನಂತರ ಅವರ ಮಕ್ಕಳು ಸ್ವಾಧೀನದಲ್ಲಿರುತ್ತಾರೆ.

ತರೀಕೆರೆ ತಾಲ್ಲೂಕಿನ ಗೋಪಾಲ ಗ್ರಾಮದ ಸರ್ವೆ ನಂ. 168/8 ರ ಸ್ವಾಧೀನದಲ್ಲಿ ವಾದಿಯ ಕುಟುಂಬದವರಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಸೇರಿದ 2 ಮನೆಗಳು ಭದ್ರಾವತಿಯಲ್ಲಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ

ಸೇರಿದ 2 ಮನೆಗಳು ಬೆಂಗಳೂರಿನಲ್ಲಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಿಂದ ಬಂದ ಆದಾಯವನ್ನು ಉಪಯೋಗಿಸಿಕೊಂಡು ವಾದಿ ಮೇಲ್ಕಂಡ ಮನೆ ಮತ್ತು ಜಮೀನನ್ನು ಖರೀದಿಸಿ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ 1 ನೇ ಪ್ರತಿವಾದಿಯ ಮಕ್ಕಳು ಒಟ್ಟು 7 ಕೊಳವೆ ಬಾವಿಗಳನ್ನು ಕೊರೆಸಿರುತ್ತಾರೆ ಎಂದರೆ ಸರಿ. ಕೊಳವೆ ಬಾವಿಗಳನ್ನು ಕೊರೆಸಲು 1 ನೇ ಪ್ರತಿವಾದಿಯ ಮಕ್ಕಳು ಸಾಲ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕೆಲವು ದಾವಾ ಆಸ್ತಿಗಳಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಅಡಿಕೆ, ತೆಂಗು ಇತ್ಯಾದಿ ಬೆಳೆಗಳನ್ನು ಬೆಳೆದಿರುತ್ತಾರೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ , ಗುಬ್ಬಿ.